ಏನೋ ದೆವ್ವ, ಭೂತ, ಪಿಶಾಚಿ, ಅದರ ಸುದ್ದಿಗೆ ಹೋಗಬೇಡಿ, ಮುಟ್ಟಬೇಡಿ ಅನ್ನುವ ಮಾತು ಅಭ್ಯಾಸ ಆಗಿ ಹೋಗಿದೆ. ಹಾಗಾಗಿ ಇವತ್ತು ಪ್ರಶ್ನೆ ಬಂದಿರುವುದು ರಾಜ್ಯ ಸರ್ಕಾರ ಒಂದು ರೀತಿಯ ಷರತ್ತುಗಳಿಗೆ ಒಪ್ಪಿಕೊಂಡು, ಅವನು ಸರಂಡರ್ ಆಗಿಲ್ಲ, ರಾಜ್ಯ ಸರ್ಕಾರವೇ ಆತನಿಗೆ ಸರೆಂಡರ್ ಆಗಿ, ಈ ರೀತಿಯ ಕಂಡೀಷನ್‌ಗೆ ಒಪ್ಪಿಕೊಂಡು ವಿರೋಧ ಪಕ್ಷಗಳನ್ನು ಕೂಡ ಪೂರ್ಣ ತಾತ್ಸಾರ ಭಾವನೆಯಿಂದ ಸರ್ಕಾರ ಮಾಡಿರತಕ್ಕ ಸ್ಥಿತಿಯನ್ನು, ಇದು ಪ್ರಜಾಪ್ರಭುತ್ವ ವಿರೋಧವಾಗಿದೆಯೆಂದು, ಇದು ಜನತೆಗೆ ಮಾಡಿರತಕ್ಕ ದ್ರೋಹವೆಂದು ಹೇಳಿಕೊಂಡು ಭಾರತೀಯ ಜನತಾ ಪಕ್ಷ ಕೂಡ ಸಭಾತ್ಯಾಗ ಮಾಡುತ್ತದೆ.

(ಭಾರತೀಯ ಜನತ ಪಕ್ಷದ ಸದಸ್ಯರು ಈ ಹಂತದಲ್ಲಿ ಸಭಾತ್ಯಾಗವನ್ನು ಮಾಡಿದರು)

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯ ಮಂತ್ರಿಗಳು) : ಇವರು ಹೀಗೆ ವಾಕ್‌ಔಟ್ ಮಾಡಿದರೆ ಜನ ಏನು ತಿಳಿದುಕೊಳ್ಳುತ್ತಾರೆ? ಅವನು ಸರೆಂಡರ್ ಆಗಲೇಬಾರದಿತ್ತು ಎಂಬುದು ಇವರ ಅಭಿಪ್ರಾಯ.

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು) : ಏನೋ ಒಳ್ಳೆಯ ಕೆಲಸ ಆಯಿತಪ್ಪ ಬಹಳ ದಿವಸಗಳಿಂದ ಈ ಸಮಸ್ಯೆ ಇತ್ತು, ಬಗೆಹರಿಯಿತು ನೂರಾರು ಜನ ಪ್ರಾಣ ಕೊಟ್ಟಿದ್ದರು ಎಂದು ಹೇಳುವುದು ಬಿಟ್ಟು ಕಾಂಗ್ರೆಸ್‌ನವರು, ಬಿಜೆಪಿನವರೂ ವಾಕ್‌ಔಟ್ ಮಾಡಿದರೆ ಜನ ಇವರ ಉದ್ದೇಶ ಏನು ಎನ್ನುವುದನ್ನು ತಿಳಿದುಕೊಳ್ಳಬೇಕು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾನು ಈ ವಿಷಯದಲ್ಲಿ ಹೆಚ್ಚು ಮಾತನಾಡುವುದಿಲ್ಲ. ನಾನು ತಮ್ಮ ಮುಖಾಂತರ ಹೇಳುವುದು ಏನೆಂದರೆ ವೀರಪ್ಪನ್ ಯಾರನ್ನು ಒತ್ತೆಯಾಳುಗಳನ್ನಾಗಿ ಇಟ್ಟುಕೊಂಡಿದ್ದಾನೆ, ಅವರನ್ನು ಅವರ ಜೀವಕ್ಕೆ ಹಾನಿ ಇಲ್ಲದಂತೆ ಬಿಡುಗಡೆ ಮಾಡುವವರಿಗೂ ನನ್ನ ಅಭಿಪ್ರಾಯದಲ್ಲಿ ಇಲ್ಲಿ ಈ ವಿಷಯವನ್ನು ಪ್ರಸ್ತಾಪ ಮಾಡುವುದು ಬೇಡ. ಅವರ ಬಿಡುಗಡೆ ಆದಮೇಲೆ ಎಲ್ಲಾ ವಿಷಯವನ್ನು ಒಂದು ದಿವಸ ಪೂರ್ತಿಯಾಗಿ ಚರ್ಚೆ ಮಾಡೋಣ. ಯಾವ ಯಾವ ಸರ್ಕಾರ ಇದಕ್ಕೆ ವಿರುದ್ಧವಾಗಿದೆ, ಯಾರ್ಯಾರು ವಿರುದ್ಧವಾಗಿದ್ದಾರೆ ಎಂದು ಆಗ ಇಡೀ ದಿವಸ ಮಾತನಾಡುವುದಕ್ಕೆ ಅವಕಾಶ ಕೊಡಿ. ಆ ಎಂಟು ಜನರು ಜೀವವನ್ನು ಉಳಿಸಿಕೊಂಡು ಆಚೆ ಬರುವವರೆಗೆ ದಯವಿಟ್ಟು ಯಾರು ಈ ವಿಷಯದ ಬಗ್ಗೆ ಚರ್ಚೆ ಮಾಡಬಾರದು. ನಾನು ಎಲ್ಲಾ ಸದಸ್ಯರನ್ನು ಹಾಗೂ ಎಲ್ಲಾ ವಿರೋಧ ಪಕ್ಷದ ನಾಯಕರಲ್ಲೂ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ನಿಜವಾಗಿ ವೀರಪ್ಪನ್ ವಿಷಯದ ಬಗ್ಗೆ ನಾವೆಲ್ಲರೂ ತಲೆ ತಗ್ಗಿಸಿಕೊಂಡು ಕುಳಿತುಕೊಳ್ಳಬೇಕಾಗಿದೆ. ಇಂಥ ಒಬ್ಬ ವ್ಯಕ್ತಿ ಎರಡು ರಾಜ್ಯಕ್ಕೆ ಸವಾಲ್ ಆದನಲ್ಲಾ ಎಂದು ಎಷ್ಟೊಂದು ಅಮಾಯಕ ಜನರನ್ನು ನಾವು ಬಲಿ ಕೊಟ್ಟಿದ್ದೇವೆ. ಅದರಲ್ಲೂ ಈ ಎಂಟು ಜನರ ಪ್ರಾಣ ಎಷ್ಟು ಮುಖ್ಯ ಅನ್ನುವುದನ್ನು ನಾವು ಅರ್ಥ ಮಾಡಿಕೊಳ್ಳಬೇಕು. ವಿರೋಧ ಪಕ್ಷವೆಂದರೆ ಎಲ್ಲವನ್ನೂ ವಿರೋಧ ಮಾಡುವುದು ಅಲ್ಲ. ವಸ್ತು ಸ್ಥಿತಿಯನ್ನು ಅರ್ಥ ಮಾಡಿಕೊಳ್ಳಬೇಕು. ಆದುದರಿಂದ ಶ್ರೀರಾಮರೆಡ್ಡಿಯವರು ಹೇಳಿದಂತಹ ವಿಷಯಕ್ಕೆ ನನ್ನ ಬೆಂಬಲವನ್ನೂ ನೀಡುತ್ತಾ ಮೊದಲು ಆ ಎಂಟು